ಸಿವಿಲ್ ನ್ಯಾಯಾಧೀಶರ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಬೇಲೂರು

<u>ಉಪಸ್ಥಿತರು</u>

ಶ್ರೀ ನಾಗೇಶ ಸಿ., ಬಿ.ಎ.ಎಲ್, ಎಲ್.ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಬೇಲೂರು.

ದಿನಾಂಕಃ 21ನೇ ಸೆಪ್ಟೆಂಬರ್ ಮಾಹೆ 2020 ನೇ ಇಸವಿಃ

**<u>ಮೂಲ ದಾವಾ ಸಂಖ್ಯೆ ಃ 155/2020</u>**

| | | |
|---|---|---|
| ವಾದಿಃಗಳು | ಃ | ಕೆ.ಸಿ. ವಿರೂಪಾಕ್ಷ ಬಿನ್ ಚನ್ನೇಗೌಡ,<br>42 ವರ್ಷ ವಯಸ್ಸು, ಕೋಡನಹಳ್ಳಿ ಗ್ರಾಮ,<br>ಕಸಬಾ ಹೋಬಳಿ, ಬೇಲೂರು ತಾಲ್ಲೂಕು. |

(ಶ್ರೀ ತಮ್ಮಣ್ಣಗೌಡ ಪಿ.ಎಂ., ವಕೀಲರು ಪ್ರತಿನಿಧಿಸುತ್ತಾರೆ)

- ವಿರುದ್ಧ -

| | | |
|---|---|---|
| ಪ್ರತಿವಾದಿಃಗಳು | ಃ | 1) ರಘು ಬಿನ್ ಸಿದ್ದೇಗೌಡ,<br>35 ವರ್ಷ ವಯಸ್ಸು,<br>2) ಅಶೋಕ ಬಿನ್ ನಂಜೇಗೌಡ,<br>30 ವರ್ಷ ವಯಸ್ಸು,<br>3) ವಿರೂಪಾಕ್ಷ ಉಃ ಸ್ವಾಮಿ ಬಿನ್ ನಂಜೇಗೌಡ,<br>60 ವರ್ಷ ವಯಸ್ಸು,<br>ಎಲ್ಲರೂ ರಾಮದೇವರಹಳ್ಳಿ ಗ್ರಾಮ, ಮುಗಳವಳ್ಳಿ ಅಂಚೆ, ಅಂಬಳೆ ಹೋಬಳಿ, ಚಿಕ್ಕಮಗಳೂರು ತಾಲ್ಲೂಕು.<br>4) ರಘು ಬಿನ್ ಚಂದ್ರೇಗೌಡ, 40 ವರ್ಷ ವಯಸ್ಸು,<br>ಮಾಗಡಿ ಕೈಮರ, ಮುಗಳವಳ್ಳಿ ಅಂಚೆ,<br>ಚಿಕ್ಕಮಗಳೂರು ತಾಲ್ಲೂಕು. |

(ಪ್ರತಿವಾದಿಯರು ಏಕಪಕ್ಷೀಯ)

<u>ಃಮಧ್ಯಂತರ ಅರ್ಜಿ 2 ಕ್ಕೆ ಪಕ್ಷಕಾರರುಃ</u>

| | | |
|---|---|---|
| ಅರ್ಜಿದಾರರು | ಃ | ಕೆ.ಸಿ. ವಿರೂಪಾಕ್ಷ ಬಿನ್ ಚನ್ನೇಗೌಡ |

ವಿರುದ್ಧ

| | | |
|---|---|---|
| ಎದುರುದಾರರು | ಃ | ರಘು ಬಿನ್ ಸಿದ್ದೇಗೌಡ ಮತ್ತು ಇತರರು |

*****

**<u>ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2ರ ಮಧ್ಯಕಾಲೀನ ಅರ್ಜಿ ಸಂಖ್ಯೆ: 2 ರ ಮೇಲಿನ ಆದೇಶಃ</u>**

ವಾದಿಯು, ಪ್ರತಿವಾದಿಯರ ವಿರುದ್ಧ ಮಧ್ಯಂತರ ಅರ್ಜಿ ಸಂ.2 ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ ಪ್ರತಿವಾದಿಯರು ವಾದಿಯ ದಾವಾ ಸ್ವತ್ತಿಗೆ ಯಾವುದೇ ರೀತಿಯ ತೊಂದರೆ, ತಂಟೆ-ತಕರಾರು ಮಾಡದಂತೆ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಆದೇಶದ ಮುಖಾಂತರ ಪ್ರತಿವಾದಿಯರನ್ನು ನಿರ್ಭಂದಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

2. ವಾದಿಯು ಃ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಮತ್ತು ಅದರೊಂದಿಗಿರುವ ಪ್ರಮಾಣ ಪತ್ರಿಕೆಯಲ್ಲಿ ಹೇಳುವುದೇನೆಂದರೆ, ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಗಳ ವಿರುದ್ದ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವಾ ತಂದಿದ್ದು, ದಾವಾ ಸ್ವತ್ತು ತನ್ನ ಪಿತ್ರಾರ್ಜಿತವಾದ ಸ್ವತ್ತಾಗಿರುತ್ತದೆ. ಸದರಿ ಸ್ವತ್ತು ವಾದಿಯ ತಾತಾ ಮಲ್ಲೇಗೌಡರಿಗೆ ವಾರಸು ಮೂಲಕ ಬಂದಿದ್ದು, ಸದರಿಯವರು ನಿಧನಾನಂತರ ಅವರ ಮಗಳು ಕುಸುಮರವರ ಸ್ವಾಧೀನಾನುಭವಕ್ಕೆ ಬಂದಿರುತ್ತದೆ. ಸದರಿ ಕುಸುಮರವರು ನಿಧನಾನಂತರ ಅವರ ಮಗ ವಾದಿ ಸ್ವಾಧೀನಾನುಭವಕ್ಕೆ ಬಂದಿದ್ದು, ಹಾಲಿ ವಾದಿಯ ಹೆಸರಿಗೆ ಹಕ್ಕು ದಾಖಲಾಗಿದ್ದು, ಹಕ್ಕುದಾರಿ ಮಾಲೀಕನಾಗಿ, ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾರೆ. ಪ್ರತಿವಾದಿಯರು ಈಗ್ಗೆ 15 ದಿನಗಳ ಹಿಂದೆ ವಾದಿಯು ಜಮೀನಿನ ಸುತ್ತಲೂ ಇರುವ ಚರಂಡಿಯನ್ನು ಅಚ್ಚುಕಟ್ಟು ಮಾಡುತ್ತಿರುವ ವೇಳೆ ಪ್ರತಿವಾದಿಯರೆಲ್ಲರೂ ಅಕ್ರಮ ಕೂಟ ಕಟ್ಟಿಕೊಂಡು ಬಂದು ವಾದಿಯ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿರುತ್ತಾರೆ. ಮತ್ತು ವಾದಿಯನ್ನು ಅವಾಚ್ಯ ಪದಗಳಿಂದ ನಿಂದಿಸಿ, ಪ್ರಾಣ ಬೆದರಿಕೆ ಹಾಕಿರುತ್ತಾರೆ. ಪ್ರತಿವಾದಿಯರೆಲ್ಲರೂ ಬೇರೆ, ಬೇರೆ ಗ್ರಾಮದವರಾಗಿದ್ದು, ಪ್ರತಿವಾದಿಯರಿಗೆ ಯಾವುದೇ ರೀತಿಯ ಹಕ್ಕಾಗಲೀ, ಸ್ವಾಧೀನವಾಗಲೀ, ಮಾಲೀಕತ್ವವಾಗಲೀ, ಇಲ್ಲದಿದ್ದರೂ ವಿನಃ ಕಾರಣ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆ ಕೊಡುತ್ತಿರುತ್ತಾರೆ. ಈ ವಿಚಾರವಾಗಿ ವಾದಿಯು ಬೇಲೂರು ಪೋಲೀಸ್ ಠಾಣೆಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಸದರಿಯವರು ಸಿವಿಲ್ ಸ್ವರೂಪದ್ದಾಗಿರುವುದರಿಂದ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ತಿಳುವಳಿಕೆ ನೀಡಿರುತ್ತಾರೆ. ಪ್ರತಿವಾದಿಯರು ಹಣಬಲ, ಜನಬಲವುಳ್ಳವರಾಗಿದ್ದು, ಪ್ರತಿವಾದಿಯರ ಉಪಟಳವನ್ನು ಘನ ನ್ಯಾಯಾಲಯದ ಆದೇಶವಿಲ್ಲದೆ ತಡೆಯುವುದು ಅಸಾಧ್ಯವಾಗಿರುತ್ತದೆ. ವಾದಿಗೆ ಪ್ರೈಮಾಪೇಸಿ ಪ್ರಕರಣವಿದ್ದು, ಅನುಕೂಲತೆ ಒಲವು ಸಹ ವಾದಿಯ ಪರವಾಗಿ ಇರುತ್ತದೆ. ಆದ್ದರಿಂದ ವಾದಿಯು ಅನಿವಾರ್ಯವಾಗಿ ಈ ದಾವಾವನ್ನು ದಾಖಲು ಮಾಡಿರುತ್ತಾರೆ. ಅಲ್ಲದೇ ವಾದಿಯು ಸದರಿ ದಾವಾದೊಂದಿಗೆ ಮಧ್ಯಂತರ ಅರ್ಜಿ-2ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ ಪ್ರತಿವಾದಿಯರು ವಾದಿಯ ದಾವಾ ಸ್ವತ್ತಿಗೆ ಯಾವುದೇ ರೀತಿಯ ತೊಂದರೆ, ತಂಟೆ-ತಕರಾರು

ಮಾಡದಂತೆ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಆದೇಶದ ಮುಖಾಂತರ ಪ್ರತಿವಾದಿಯರನ್ನು ನಿರ್ಭಂದಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

3. ದಾವಾ ಸಲ್ಲಿಸಿದ ಬಳಿಕ ನ್ಯಾಯಾಲಯ ಹೊರಡಿಸಿದ ದಾವಾ ನೋಟೀಸ್ ಮತ್ತು ಸಮನ್ಸ್‌ಗೆ ಪ್ರತಿಯಾಗಿ ಪ್ರತಿವಾದಿಯರು ತನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಅಲ್ಲದೇ ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ-2ಕ್ಕೆ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಪ್ರತಿವಾದಿಯರ ವಿರುದ್ಧ ಏಕ ಪಕ್ಷೀಯ ತೀರ್ಪು ಘೋಷಣೆಗೆ ಆದೇಶವಾಗಿರುತ್ತದೆ.

4. ವಾದವನ್ನು ಆಲಿಸಲಾಯಿತು.

5. ಅರ್ಜಿ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದ್ದೇನೆ ಮತ್ತು ಅರ್ಜಿಯ ಇತ್ಯರ್ಥಕ್ಕಾಗಿ ಈ ಕೆಳಗಿನಂತೆ ಅಂಶಗಳನ್ನು ರೂಪಿಸಿರುತ್ತೇನೆಃ

1. ವಾದಿಯು, ಪ್ರತಿವಾದಿಯರು ವಾದಿಯ ದಾವಾ ಆಸಿಯ ವಾದಿಯರ ಶಾಂತಿಯುತ ಸ್ವಾಧೀನಾನಭವಕ್ಕೆ ತೊಂದರೆ, ಕಿರುಕುಳ ನೀಡುತ್ತಿರುತ್ತಾರೆಂದು ಮೇಲ್ನೋಟಕ್ಕೆ ರುಜುವಾತುಪಡಿಸುವರೆ?
2. ವಾದಿಯು ಅರ್ಜಿಯಲ್ಲಿ ಕೋರಿರುವಂತೆ ತಮ್ಮ ಪರ ಅನುಕೂಲತೆಯ ಒಲವು ಇದೆ ಎಂಬುದನ್ನು ಸಾಬೀತುಪಡಿಸುವರೆ?
3. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡದಿದ್ದರೆ ತುಂಬಲಾರದ ಹಾನಿ ಅಥವಾ ನಷ್ಟ ಉಂಟಾಗುವ ಸಂಭವವಿದೆಯೇ ಎಂಬುದನ್ನು ರುಜುವಾತುಪಡಿಸುವರೆ?
4. ಏನು ಆದೇಶ?

6. ಈ ಪ್ರಕರಣದ ಕಡತ ಮತ್ತು ವಾದಿಯು ಸಲ್ಲಿಸಿದ ಮಧ್ಯಂತರ ಅರ್ಜಿ-2 ಹಾಗೂ ದಾಖಲೆಯನ್ನು ಪರಿಗಣಿಸಿ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆಃ

| | | | |
|---|---|---|---|
| ಅಂಶ | - | 1 ರಿಂದ 3 | ಃ ಸಕಾರಾತ್ಮಕವಾಗಿ |
| ಅಂಶ | - | 4 | ಃ ಅಂತಿಮ ಆದೇಶದಂತೆ |

ಃಕಾರಣಗಳುಃ

7. ಅಂಶ ಸಂಖ್ಯೆಃ1 ರಿಂದ 3ಃ- ಈ ಮೂರೂ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಹಾಗೂ ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಒಟ್ಟಿಗೆ ವಿಮರ್ಶೆಗೆ ತೆಗೆದುಕೊಂಡಿರುತ್ತೇನೆಃ-

8. ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿ, ಪ್ರತಿವಾದಿಯಾಗಲೀ ಅಥವಾ ಅವರ ಕಡೆಯವರು ಯಾರೇ ಆಗಲೀ ವಾದಿಯ ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡದಂತೆ ಮತ್ತು ಕೃಷಿ ಚಟುವಟಿಕಗಳಿಗೆ ಯಾವುದೇ ರೀತಿಯ ತೊಂದರೆ, ತಕರಾರು, ಅಡ್ಡಿ-ಆತಂಕಪಡಿಸದಂತೆ ಪ್ರತಿವಾದಿಯರ ವಿರುದ್ಧ ಶಾಶ್ವತ ನಿರೋದಾಜ್ಞೆಯ ಆದೇಶವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಸದರಿ ದಾವಾದೊಂದಿಗೆ ಮಧ್ಯಂತರ ಅರ್ಜಿ-2ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ ಪ್ರತಿವಾದಿಯರು ವಾದಿಯ ದಾವಾ ಸ್ವತ್ತಿಗೆ ಯಾವುದೇ ರೀತಿಯ ತೊಂದರೆ, ತಂಟೆ-ತಕರಾರು ಮಾಡದಂತೆ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಆದೇಶದ ಮುಖಾಂತರ ಪ್ರತಿವಾದಿಯರನ್ನು ನಿರ್ಭಂದಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

9. ವಾದಿಯ ಪ್ರಕಾರ, ದಾವಾ ಸ್ವತ್ತು ತನ್ನ ಪಿತ್ರಾರ್ಜಿತವಾದ ಸ್ವತ್ತಾಗಿರುತ್ತದೆ. ಸದರಿ ಸ್ವತ್ತು ವಾದಿಯ ತಾತಾ ಮಲ್ಲೇಗೌಡರಿಗೆ ವಾರಸು ಮೂಲಕ ಬಂದಿದ್ದು, ಸದರಿಯವರು ನಿಧನಾನಂತರ ಅವರ ಮಗಳು ಕುಸುಮರವರ ಸ್ವಾಧೀನಾನುಭವಕ್ಕೆ ಬಂದಿರುತ್ತದೆ. ಸದರಿ ಕುಸುಮರವರು ನಿಧನಾನಂತರ ಅವರ ಮಗ ವಾದಿ ಸ್ವಾಧೀನಾನುಭವಕ್ಕೆ ಬಂದಿದ್ದು, ಹಾಲಿ ವಾದಿಯ ಹೆಸರಿಗೆ ಹಕ್ಕು ದಾಖಲಾಗಿದ್ದು, ಹಕ್ಕುದಾರಿ ಮಾಲೀಕನಾಗಿ, ಶಾಂತಿಯುತ ಸ್ವಾಧೀನಾನುಭವದಲ್ಲಿರುವುದಾಗಿ ಹೇಳಿರುತ್ತಾರೆ. ಸದರಿ ದಾವಾ ಆಸ್ತಿಯು ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು, ಕಸಬಾ ಹೋಬಳಿ, ಶಿರಗಟ್ಟ ಗ್ರಾಮದ ಸರ್ವೆ ನಂಬರ್ಃ 15 ರ ಖುಷ್ಕಿ 4 ಎಕರೆ 37 ಗುಂಟೆ ಇದ್ದು, ಜಮೀನಿಗೆ ಸಂಬಂಧಿಸಿದಂತೆ, ಮೂಲತಃ ವಾದಿಯ ತಾತಾ ಮಲ್ಲೇಗೌಡರವರ ಹೆಸರಿನಲ್ಲಿರುವ ವಾದಿಯು ಹಾಜರುಪಡಿಸಿರುವ ರೆಕಾರ್ಡ್ಸ್ ಆಫ್ ರೈಟ್ಸ್ ಮತ್ತು ಪಹಣಿಯ ದಾಖಲೆಗಳ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ. ಅದೇ ರೀತಿ ಸದರಿ ಜಮೀನು ಪೌತಿ ಖಾತೆ ಆಧಾರದ ಮೇಲೆ ವಾದಿಯ ತಾಯಿ ಕುಸುಮರವರಿಗೆ ಹಸ್ತಾಂತರವಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ವಾದಿಯು ಎಂ.ಆರ್. ನಂಃ ಹೆಚ್9ಃ2016-17 ರಂತೆ ಮ್ಯುಟೇಷನ್ ರಿಜಿಸ್ಟರ್‌ನ್ನು ಸಲ್ಲಿಸಿರುತ್ತಾರೆ. ಸದರಿ ಮ್ಯುಟೇಷನ್ ರಿಜಿಸ್ಟರ್‌ನ ಆಧಾರದ ಮೇಲೆ ವಾದಿಯ ತಾಯಿ ಕುಸುಮರವರ ಹೆಸರಿಗೆ ಪಹಣಿ ಸಹ ನಮೂದಾಗಿರುತ್ತದೆ. ಸದರಿ ಪಹಣಿಯನ್ನು ಸಹ ವಾದಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ಹೀಗಿರುವಾಗ ಸದರಿ ಕುಸುಮರವರ ದಾವಾ ಆಸ್ತಿ ನಮೂದು ಆದ ನಂತರ ವಾದಿಗೆ ವಿಭಾಗ ಮೂಲಕ ವಾದಿಯ ಹೆಸರಿಗೆ ಬಂದಿರುತ್ತದೆ. ಸದರಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಯು ತನ್ನ ಹೆಸರಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ತೋರಿಸಲು ಮ್ಯುಟೇಷನ್ ರಿಜಿಸ್ಟರ್ ನಂಃ ಹೆಚ್17ಃ2016-17 ರಂತೆ ಮ್ಯುಟೇಷನ್ ರಿಜಿಸ್ಟರ್‌ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ಮ್ಯುಟೇಷನ್ ರಿಜಿಸ್ಟರ್ ಆಧಾರದ ಮೇಲೆ ವಾದಿಯ ಹೆಸರಿಗೆ ಪಹಣಿ ಸಹ ನಮೂದಾಗಿರುತ್ತದೆ. ಈ ಎಲ್ಲಾ ಮೇಲ್ಕಂಡ ದಾಖಲೆಗಳನ್ನು

ಕೂಲಂಕುಷವಾಗಿ ಪರಿಶೀಲಿಸಿದಾಗ, ದಾವಾ ಆಸ್ತಿ ವಾದಿಯ ತಾತನ ಪಿತ್ರಾರ್ಜಿತವಾದ ಆಸ್ತಿಯಾಗಿದ್ದು, ನಂತರ ಸದರಿ ಆಸ್ತಿ ವಾದಿಯ ತಾಯಿಗೆ ಬಂದಿದ್ದು, ನಂತರ ವಾದಿಯ ತಾಯಿಯ ಮುಖಾಂತರ ವಾದಿಯ ಹೆಸರಿಗೆ ಬಂದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇದರಿಂದ ವಾದಿಯು ದಾವಾ ಆಸ್ತಿಯ ಹಕ್ಕುದಾರಿ ಮಾಲೀಕರು ಎಂದು ಹೇಳಬಹುದಾಗಿದೆ. ಹೀಗಿರುವಾಗ ದಾವಾ ಆಸ್ತಿಯಲ್ಲಿ ವಾದಿಯು ಶಾಂತಿಯುತವಾಗಿ ಹಕ್ಕು ಮತ್ತು ಸ್ವಾಧೀನವನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಸದರಿ ಸ್ವಾಧೀನವನ್ನು ಹೊಂದಿದ ಬಗ್ಗೆ ತೋರಿಸುವ ಸಲುವಾಗಿ ವಾದಿಯು ಸದರಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕಂದಾಯವನ್ನು ಸರ್ಕಾರಕ್ಕೆ ಪಾವತಿಸಿದ ಬಗ್ಗೆ ಕಂದಾಯ ರಶೀದಿಯನ್ನು ಸಹ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ವಾದಿಯು ಹಾಜರುಪಡಿಸಿರುವ ಎಲ್ಲಾ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ದಾವಾ ಆಸ್ತಿಯು ವಾದಿಯ ಪಿತ್ರಾರ್ಜಿತವಾದ ಆಸ್ತಿಯಾಗಿದ್ದು, ಸದರಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಮ್ಯುಟೇಷನ್ ಆಧಾರದ ಮೇಲೆ ಪಹಣಿಗಳನ್ನು ಪಡೆದುಕೊಂಡು, ನಂತರ ಸರ್ಕಾರಕ್ಕೆ ಸಲ್ಲಬೇಕಾದ ಕಂದಾಯವನ್ನು ಪಾವತಿ ಮಾಡಿಕೊಂಡು ಹಕ್ಕುದಾರಿ ಮಾಲೀಕರಾಗಿ ಶಾಂತಿಯುತ ಸ್ವಾಧೀನದಲ್ಲಿರುವುದು ಕಂಡುಬರುತ್ತದೆ. ಇದರಿಂದ ವಾದಿಯು ತಾನು ದಾವಾ ಆಸ್ತಿಗಳಲ್ಲಿ ಹಕ್ಕುದಾರಿ ಮಾಲೀಕರಾಗಿ, ಶಾಂತಿಯುತ ಸ್ವಾಧೀನದಲ್ಲಿರುವುದಾಗಿ ರುಜುವಾತುಪಡಿಸಲು ಸಫಲರಾಗಿರುತ್ತಾರೆ.

10. ಹೀಗಿರುವಾಗ ವಾದಿಯರು ಮುಂದುವರೆದು ತನ್ನ ಅರ್ಜಿಯಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ಹೇಳುವುದೇನೆಂದರೆ, ಪ್ರತಿವಾದಿಯರು ಈಗ್ಗೆ 15 ದಿನಗಳ ಹಿಂದೆ ವಾದಿಯು ಜಮೀನಿನ ಸುತ್ತಲೂ ಇರುವ ಚರಂಡಿಯನ್ನು ಅಚ್ಚುಕಟ್ಟು ಮಾಡುತ್ತಿರುವ ವೇಳೆ ಪ್ರತಿವಾದಿಯರೆಲ್ಲರೂ ಅಕ್ರಮ ಕೂಟ ಕಟ್ಟಿಕೊಂಡು ಬಂದು ವಾದಿಯ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿರುತ್ತಾರೆ. ಮತ್ತು ವಾದಿಯನ್ನು ಅವಾಚ್ಯ ಪದಗಳಿಂದ ನಿಂದಿಸಿ, ಪ್ರಾಣ ಬೆದರಿಕೆ ಹಾಕಿರುತ್ತಾರೆ. ಪ್ರತಿವಾದಿಯರೆಲ್ಲರೂ ಬೇರೆ, ಬೇರೆ ಗ್ರಾಮದವರಾಗಿದ್ದು, ಪ್ರತಿವಾದಿಯರಿಗೆ ಯಾವುದೇ ರೀತಿಯ ಹಕ್ಕಾಗಲೀ, ಸ್ವಾಧೀನವಾಗಲೀ, ಮಾಲೀಕತ್ವವಾಗಲೀ, ಇಲ್ಲದಿದ್ದರೂ ವಿನಃ ಕಾರಣ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆ ಕೊಡುತ್ತಿರುತ್ತಾರೆ. ಈ ವಿಚಾರವಾಗಿ ವಾದಿಯು ಬೇಲೂರು ಪೋಲೀಸ್ ಠಾಣೆಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಸದರಿಯವರು ಸಿವಿಲ್ ಸ್ವರೂಪದ್ದಾಗಿರುವುದರಿಂದ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ತಿಳುವಳಿಕೆ ನೀಡಿರುತ್ತಾರೆ. ಪ್ರತಿವಾದಿಯರು ಹಣಬಲ, ಜನಬಲವುಳ್ಳವರಾಗಿದ್ದು, ಪ್ರತಿವಾದಿಯರ ಉಪಟಳವನ್ನು ಘನ ನ್ಯಾಯಾಲಯದ ಆದೇಶವಿಲ್ಲದೆ ತಡೆಯುವುದು ಅಸಾಧ್ಯವಾಗಿರುತ್ತದೆ. ವಾದಿಗೆ ಪ್ರೈಮಾಪೇಸಿ ಪ್ರಕರಣವಿದ್ದು, ಅನುಕೂಲತೆ ಒಲವು ಸಹ ವಾದಿಯ ಪರವಾಗಿ ಇರುತ್ತದೆಂದು ವಾದಿಯು ತನ್ನ ವಾದ ಪತ್ರದಲ್ಲಿ ಹಾಗೂ ಮಧ್ಯಂತರ ಅರ್ಜಿ-2ರಲ್ಲಿ ಹೇಳಿರುತ್ತಾರೆ. ಆದರೆ ಸದರಿ ಅರ್ಜಿಯಲ್ಲಿ ಹಾಗೂ ವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಅಲ್ಲಗೆಳೆಯುವ ಸಲುವಾಗಿ

ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ್ ನೀಡಿದ್ದು, ಸದರಿ ಸಮನ್ಸ್ ಜಾರಿಯಾಗಿದ್ದರೂ ಸಹ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿ ವಾದಿಯ ವಾದ ಪತ್ರಕ್ಕೆ ವಿರುದ್ಧವಾಗಿ ಲಿಖಿತ ಹೇಳಿಕೆಯನ್ನಾಗಲೀ ಅಥವಾ ವಾದಿಯರ ಮಧ್ಯಂತರ ಅರ್ಜಿ-2ಕ್ಕೆ ತಕರಾರನ್ನಾಗಲೀ ಸಲ್ಲಿಸಿರುವುದಿಲ್ಲ, ಇದರಿಂದ ಅವರ ವಿರುದ್ಧ ಏಕ ಪಕ್ಷೀಯ ತೀರ್ಪು ಘೋಷಣೆಗೆ ಆದೇಶವಾಗಿರುತ್ತದೆ. ಅಲ್ಲದೇ ವಾದಿಯು ತಮ್ಮ ಅರ್ಜಿಯಲ್ಲಿ ಹೇಳಿರುವ ಅಂಶಗಳಿಗೆ ಪೂರಕವಾಗಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಒದಗಿಸಿಕೊಡುವುದರ ಮೂಲಕ ತಾನು ದಾವಾ ಆಸ್ತಿಗೆ ಹಕ್ಕುದಾರಿ ಮಾಲೀಕರು ಹಾಗೂ ತಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುವುದಾಗಿ ಸಾಬೀತುಪಡಿಸಿರುವುದರಿಂದ, ವಾದಿಯು ತನ್ನ ಪರವಾಗಿ ಹಾಗೂ ಅನುಕೂಲತೆಯ ಒಲವು ಸಹ ವಾದಿಯರ ಪರವಾಗಿಯೇ ಇದೇ ಎಂಬುದನ್ನು ರುಜುವಾತುಪಡಿಸಲು ಯಶಸ್ವಿಯಾಗಿರುತ್ತಾರೆ. ಈ ಹಂತದಲ್ಲಿ ವಾದಿಯ ದಾವಾ ಆಸ್ತಿಯ ಸ್ವಾಧೀನಕ್ಕೆ ಪ್ರತಿವಾದಿಯರು ತೊಂದರೆ ಮಾಡುತ್ತಾರೆ ಎಂದು ಹೆದರಿಕೆ ಉಂಟಾದರೆ ಸಾಕು, ವಾದಿಯ ಪರವಾಗಿ ನ್ಯಾಯಾಲಯವು ನಿರ್ಬಂಧಕಾಜ್ಞೆಯನ್ನು ನೀಡಬಹುದು ಎಂದು ಈ ಕೆಳಕಂಡ ಪ್ರಕರಣದಲ್ಲಿ ಉಲ್ಲೇಖಿಸಿರುತ್ತಾರೆ.

**1998(5) K.L.J. 168**

**In Between Romeo M.R.Aquinas and Ors.**

**/Vs./**
**Florina Mothinas and Anor.**

**In this decision, in Para 6, His Lordship has clearly held as under:**

*In this view of the Appellate Court is prima-facie wrong. The plaintiff has specifically claiming right over 3 feet passage. This right is not disputed by both the parties. Now, the plaintiffs allegation was that, there was an interference or at least apprehended that there is likelihood of interference. When a man to live in peace he resorts to Court and seek an order of injunction. When the defendant admits the claim of the plaintiffs nobody will be prejudiced by granting the defendant for injunction. After all the best*

*made be the security i.e. granted by the Court to the plaintiffs. If there is going to be no interference, the defendants not prejudiced in passing of such an order of injunction is not going to affect the defendant at all. Once the matter has been seized by the Court, it is for the Court to grant relief, the parties desire to get and when the relief is available on the basis of the averments made in the plaint and grantable on the basis of the written statement there could be no impediment for granting such a relief at all. The non grant of the relief by the appellate Court is error apparent on the face of the record. The lower Court has also decline to grant such a relief on the ground that there is no interference on the second defendant. A man might not known the mind of another. When the fear is on the minds of the plaintiffs the Court must dispel the order and when admissions are made they should be made immatured into a decree.*

**11. ಮೇಲ್ಕಂಡ ತೀರ್ಪಿನಲ್ಲಿ ಉಲ್ಲೇಖಿಸಿರುವಂತೆ ವಾದಿಗೆ ಒಂದು ವೇಳೆ ಪ್ರತಿವಾದಿಯರು ದಾವಾ ಆಸ್ತಿಗೆ ಅತಿಕ್ರಮ ಪ್ರವೇಶ ಮಾಡಿ, ವಾದಿಯರ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆವನ್ನುಂಟು ಮಾಡುತ್ತಿದ್ದಾರೆಂದು ಹೆದರಿಕೆ ಇದ್ದರೆ ಸಾಕು ನ್ಯಾಯಾಲಯವು ಪ್ರತಿವಾದಿಯರ ವಿರುದ್ಧ ನಿರ್ಬಂಧಕಾಜ್ಞೆಯನ್ನು ಹೊರಡಿಸಬಹುದು ಎಂದು ಸದರಿ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುತ್ತದೆ. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ವಾದಿಗೆ ದಾವಾ ಆಸ್ತಿ ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿದ್ದು, ಅದರ ಅನ್ವಯ ತನ್ನ ಹೆಸರಿಗೆ ರೆವಿನ್ಯೂ ದಾಖಲೆಗಳನ್ನು ಪಡೆದುಕೊಂಡು, ತಾವು ಶಾಂತಿಯುತ ಸ್ವಾಧೀನದಲ್ಲಿರುವುದಾಗಿ ಸ್ಪಷ್ಟವಾಗಿ ಮೇಲ್ನೋಟಕ್ಕೆ ತೋರಿಸಲು ಸಫಲರಾಗಿರುತ್ತಾರೆ. ಈ ಎಲ್ಲಾ**

ಮೇಲ್ಕಂಡ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ವಾದಿಯು ತನ್ನ ಪರವಾಗಿ ಮೇಲ್ನೋಟಕ್ಕೆ ಪ್ರಕರಣ ಇದೆ ಎಂದು ಹಾಗೂ ಅನುಕೂಲತೆಯ ಒಲವು ಸಹ ವಾದಿಯ ಪರವಾಗಿ ಇದೆ ಎಂದು ತೋರಿಸಲು ಸಫಲರಾಗಿರುತ್ತಾರೆ. ಒಂದು ವೇಳೆ ವಾದಿಯ ಪರವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡದಿದ್ದ ಪಕ್ಷದಲ್ಲಿ ಪ್ರತಿವಾದಿಯರಿಗಿಂತ ವಾದಿಗೆ ಹೆಚ್ಚಿನ ತೊಂದರೆಯಾಗುವ ಸಂಭವ ಇರುತ್ತದೆ. ಆದ್ದರಿಂದ ಸದರಿ ಅರ್ಜಿಯಲ್ಲಿ ವಾದಿಯು ಕೇಳಿರುವ ಪರಿಹಾರವನ್ನು ವಾದಿಯು ಪಡೆಯಲು ಅರ್ಹರಿರುತ್ತಾರೆ. ಆದ್ದರಿಂದ ಸದರಿ ಮಧ್ಯಂತರ ಅರ್ಜಿ-2ನ್ನು ಅಂಗೀಕರಿಸಲು ಅರ್ಹವಾಗಿರುತ್ತದೆ. ಈ ಎಲ್ಲಾ ಕಾರಣಗಳ ಆಧಾರದ ಮೇಲೆ ಈ ಮೂರೂ ಅಂಶಗಳನ್ನು " ಸಕಾರಾತ್ಮಕ " ವಾಗಿ ಉತ್ತರಿಸುತ್ತೇನೆ.

<u>ಅಂಶ ಸಂಖ್ಯೆ:4:-</u>

12. ಈ ಮೇಲ್ಕಂಡ ಅಂಶಗಳಲ್ಲಿನ ಕಾರಣಗಳಿಂದ ಈ ಕೆಳಕಂಡಂತೆ ಅಂತಿಮ ಆದೇಶವನ್ನು ಮಾಡಿರುತ್ತೇನೆ:

:ಆದೇಶ:

ವಾದಿಯು, ಪ್ರತಿವಾದಿಯರ ವಿರುದ್ಧ ಸಲ್ಲಿಸಿದ ಮಧ್ಯಂತರ ಅರ್ಜಿ -2 ನ್ನು ಪುರಸ್ಕರಿಸಿದೆ.

ಮುಂದುವರೆದು, ದಾವೆ ತೀರ್ಮಾನವಾಗುವವರೆಗೆ ಪ್ರತಿವಾದಿಯಾಗಲೀ ಅಥವಾ ಅವರ ಕಡೆಯವರಾಗಲೀ ಅಥವಾ ಬೇರೆ ಯಾರೇಯಾಗಲೀ ಯಾವುದೇ ರೀತಿಯಿಂದಲೂ ದಾವಾ ಅನುಸೂಚಿ ಸ್ವತ್ತುಗಳ ವಾದಿಯರ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆ, ಕಿರುಕುಳ ನೀಡದಂತೆ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಆದೇಶದ ಮುಖಾಂತರ ನಿರ್ಭಂದಿಸಿ ಆದೇಶಿಸಿದೆ.

ಖರ್ಚಿನ ಕುರಿತು ಯೂವುದೇ ಆದೇಶವಿರುವುದಿಲ್ಲ.

(ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರಳಿಗೆ ಉಕ್ತಲೇಖನವನ್ನು ಕೊಟ್ಟು, ಪರಿಷ್ಕರಿಸಿ, ತಿದ್ದುಪಡಿ ಮಾಡಿ ದಿನಾಂಕ: 21ನೇ ಸೆಪ್ಟೆಂಬರ್ 2020 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)

(ನಾಗೇಶ ಪಿ.)
ಸಿವಿಲ್ ನ್ಯಾಯಾಧೀಶರು,ಬೇಲೂರು

ಮಧ್ಯಂತರ ಅರ್ಜಿ 2 ರ ಆದೇಶದ ಭಾಗವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತುಃ

ಃಆದೇಶಃ

ವಾದಿಯು, ಪ್ರತಿವಾದಿಯರ ವಿರುದ್ಧ ಸಲ್ಲಿಸಿದ ಮಧ್ಯಂತರ ಅರ್ಜಿ -2 ನ್ನು ಪುರಸ್ಕರಿಸಿದೆ.

ಮುಂದುವರೆದು, ದಾವೆ ತೀರ್ಮಾನವಾಗುವವರೆಗೆ ಪ್ರತಿವಾದಿಯಾಗಲೀ ಅಥವಾ ಅವರ ಕಡೆಯವರಾಗಲೀ ಅಥವಾ ಬೇರೆ ಯಾರೇಯಾಗಲೀ ಯಾವುದೇ ರೀತಿಯಿಂದಲೂ ದಾವಾ ಅನುಸೂಚಿ ಸ್ವತ್ತುಗಳ ವಾದಿಯರ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆ, ಕಿರುಕುಳ ನೀಡದಂತೆ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಆದೇಶದ ಮುಖಾಂತರ ನಿರ್ಭಂದಿಸಿ ಆದೇಶಿಸಿದೆ.

ಖರ್ಚಿನ ಕುರಿತು ಯೂವುದೇ ಆದೇಶವಿರುವುದಿಲ್ಲ.

(ನಾಗೇಶ ಪಿ.)
ಸಿವಿಲ್ ನ್ಯಾಯಾಧೀಶರು,ಬೇಲೂರು